ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	475
ಸದಸ್ಯರ ಹೆಸರು	:	ಶ್ರೀ ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	09-03-2020
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿ ಕಳೆದ ವರ್ಷ ಉಂಟಾದ ನೆರೆ ಹಾವಳಿಗೆ ಸಿಲುಕಿರುವ ಜಿಲ್ಲೆಗಳೆಷ್ಟು;</td><td>ರಾಜ್ಯದಲ್ಲಿ ಕಳೆದ ವರ್ಷ ಉಂಟಾದ ನೆರೆ ಹಾವಳಿಗೆ ಸಿಲುಕಿರುವ ಜಿಲ್ಲೆಗಳ ಸಂಖ್ಯೆ 25.</td></tr>
<tr><td>(ಆ)</td><td>ಹಾನಿಗೊಳಗಾದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳೆಷ್ಟು; ಹಾನಿಯ ಪ್ರಮಾಣವೆಷ್ಟು;</td><td>ಹಾನಿಗೊಳಗಾದ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಹಾಗೂ ಹಾನಿಯ ಪ್ರಮಾಣದ ವಿವರ ಈ ಕೆಳಕಂಡಂತಿದೆ:
(ರೂ.ಕೋಟಿಗಳಲ್ಲಿ)
<table>
<tr><th>ಶಾಲೆಗಳು</th><th>ಕುಸಿದಿರುವ ಕೊಠಡಿಗಳ</th><th>ತೀವ್ರ ಹಾನಿಗೊಳಗಾದ ಕೊಠಡಿಗಳ ಸಂಖ್ಯೆ</th><th>ಭಾಗಶ: ಹಾನಿಗೊಳಗಾದ ಕೊಠಡಿಗಳ ಸಂಖ್ಯೆ</th><th>ಅಲ್ಪ ಪ್ರಮಾಣದಲ್ಲಿ ಕುಸಿದಿರುವ ಕೊಠಡಿಗಳ ಸಂಖ್ಯೆ</th><th>ಅಂದಾಜು ನಷ್ಟ</th></tr>
<tr><td>ಪ್ರಾಥಮಿಕ</td><td>2690</td><td>6048</td><td>4820</td><td>2592</td><td>660.00</td></tr>
<tr><td>ಪ್ರೌಢ</td><td>101</td><td>885</td><td>1079</td><td>412</td><td>70.00</td></tr>
</table>
</td></tr>
<tr><td>(ಇ)</td><td>ಪ್ರವಾಹ ಪೀಡಿತ ಜಿಲ್ಲೆಗಳಲ್ಲಿ ಹಾನಿಗೊಳಗಾದ ಶಾಲೆಗಳ ಪುನರ್ ನಿರ್ಮಾಣಕಾರ್ಯದ ಪ್ರಗತಿ ಎಷ್ಟು; ಹಾಗೂ ಪ್ರವಾಹದ ಕಾರಣ ಶಿಕ್ಷಣ ಸೌಲಭ್ಯದಿಂದ ವಂಚಿತರಾದ ಸಾವಿರಾರು ಮಕ್ಕಳ ಶಿಕ್ಷಣ ಮುಂದುವರಿಕೆಗೆ ಸಕಾರ ಕೈಗೊಂಡಿರುವ ಕ್ರಮಗಳೇನು;</td><td>ರಾಜ್ಯದಲ್ಲಿ ಪ್ರವಾಹದಿಂದ ಹಾನಿಗೊಳಗಾದ 13 ಜಿಲ್ಲೆಗಳ 6196 ಸರ್ಕಾರಿ ಶಾಲೆಗಳಲ್ಲಿನ 13260 ಕೊಠಡಿಗಳ ತುರ್ತು ದುರಸ್ಥಿ ಕಾಮಗಾರಿಗಳಿಗೆ ಕಂದಾಯ ಇಲಾಖೆಯಿಂದ ರೂ.199.51 ಕೋಟಿ ಅನುದಾನವನ್ನು ಒದಗಿಸಲಾಗಿದ್ದು, 2377 ಕಾಮಗಾರಿಗಳು ಮುಕ್ತಾಯಗೊಂಡಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ.

ಪ್ರಕೃತಿ ವಿಕೋಪದಿಂದ ಹಾನಿಗೊಳಗಾದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಕೊಠಡಿ ಪುನರ್ ನಿರ್ಮಾಣಕ್ಕಾಗಿ ಈ ಕೆಳಕಂಡಂತೆ ನಬಾರ್ಡ್ ಸಹಯೋಗದ ಆರ್.ಐ.ಡಿ.ಎಫ್-25ರ ಯೋಜನೆಯಡಿ ರೂ.75807.30 ಲಕ್ಷ ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.
(ರೂ.ಕೋಟಿಗಳಲ್ಲಿ)
<table>
<tr><th>ಶಾಲೆಗಳು</th><th>ಶಾಲೆಗಳ ಸಂಖ್ಯೆ</th><th>ಕೊಠಡಿಗಳ ಸಂಖ್ಯೆ</th><th>ಅನುದಾನ</th></tr>
<tr><td>ಪ್ರಾಥಮಿಕ</td><td>3227</td><td>6044</td><td>689.19</td></tr>
<tr><td>ಪ್ರೌಢ</td><td>159</td><td>425</td><td>68.88</td></tr>
<tr><td>ಒಟ್ಟು</td><td>3386</td><td>6469</td><td>758.07</td></tr>
</table>
ಪ್ರವಾಹದ ಕಾರಣ ಶಿಕ್ಷಣ ಸೌಲಭ್ಯದಿಂದ ವಂಚಿತರಾದ ಮಕ್ಕಳ ಶಿಕ್ಷಣ ಮುಂದುವರಿಕೆಗೆ ಕ್ರಮ ಕೈಗೊಂಡಿದ್ದು, ವಿವರಗಳನ್ನು ಅನುಬಂಧ ದಲ್ಲಿ ಒದಗಿಸಿದೆ.</td></tr>
</table>

	ಪ್ರಶ್ನೆ	ಉತ್ತರ
(ಈ)	ಶಾಲೆಗಳ ಪುನರ್ ನಿರ್ಮಾಣಕ್ಕೆ ಬೇಕಾದ ಹಣವೆಷ್ಟು; ಇದುವರಗೂ ಸರ್ಕಾರದಿಂದ ಎಷ್ಟು ಹಣ ಬಿಡುಗಡೆಯಾಗಿದೆ?	ರಾಜ್ಯದ 3386 ಸರ್ಕಾರಿ ಶಾಲೆಗಳ 6469 ಕೊಠಡಿಗಳ ಪುನರ್ ನಿರ್ಮಾಣಕ್ಕಾಗಿ ನಬಾರ್ಡ್ ಸಹಯೋಗದ ಆರ್.ಐ.ಡಿ.ಎಫ್-25ರ ಯೋಜನೆಯಡಿ ರೂ.75807.30 ಲಕ್ಷ ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. 2020-21ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಒದಗಿಸಿಕೊಂಡು ಕ್ರಮವಹಿಸಲಾಗುವುದು.

ಇಪಿ 56 ಯೋಸಕ 2020

(ಎಸ್. ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಗೋವಿಂದರಾಜ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:475ಕ್ಕೆ

ಅನುಬಂಧ

ಕ್ರ.ಸಂ	ಜಿಲ್ಲೆ	ತಾತ್ಕಾಲಿಕ ಷೆಡ್/ ಸಮುದಾಯ ಭವನ / ಧಾರ್ಮಿಕ ಕಟ್ಟಡಗಳಲ್ಲಿ ನಡೆಯುತ್ತಿರುವ ಶಾಲೆಗಳು	ಹೆಚ್ಚುವರಿ ತರಗತಿಗಳು ನಡೆಸುತ್ತಿರುವ ಶಾಲೆಗಳು	ಹೆಚ್ಚುವರಿ ಸಮವಸ್ತ್ರ ವಿತರಣೆ	ಹೆಚ್ಚುವರಿ ಪಠ್ಯ ಪುಸ್ತಕ ವಿತರಣೆ
1	Belgaum	70	0	14528	65480
2	Chikkodi	40	0	38786	571771
3	Bagalkote	45	0	2835	329892
4	Chikkamagalur	1	0	100	0
5	Shimoga	1	0	754	16454
6	D Kannada	0	628	0	720
7	Dharawad	0	0	2172	20522
8	Gadag	46	0	1960	70495
9	Haveri	0	0	0	2067
10	Hassan	0	0	0	0
11	Kodagu	0	0	1298	21387
12	Mysore	8	0	0	8981
13	Udupi	0	0	0	0
14	U Kannada	0	0	0	4662
15	Sirsi	0	0	0	524
	Total	**211**	**628**	**62433**	**1112955**